# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 41 |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿವೇಕ ಯೋಜನೆ ಒಂದು ಉತ್ತಮವಾದ ಯೋಜನೆಯಾಗಿದ್ದು ಸರ್ಕಾರ ಈ ಯೋಜನೆಯನ್ನು ಮುಂದವರಿಸುತ್ತಿದೆಯೇ; | ಸರ್ಕಾರಿ ಶಾಲೆಗಳಲ್ಲಿ ಕೊಠಡಿ ನಿರ್ಮಾಣ ಮಾಡಲು ಸರ್ಕಾರದಿಂದ ರಾಜ್ಯವಲಯದ ಮುಂದುವರೆದ ಯೋಜನೆಯಡಿ ಪ್ರತಿ ವರ್ಷ ಕಾಮಗಾರಿಗಳನ್ನು ಮಂಜೂರು ಮಾಡಲಾಗುತ್ತದೆ. ಅದರಂತೆ 2022-23ನೇ ಸಾಲಿನಲ್ಲಿ ಮಂಜೂರು ಮಾಡಲಾದ ಕಾಮಗಾರಿಯನ್ನು ವಿವೇಕ ಯೋಜನೆಯೆಂದು ಗುರುತಿಸಲಾಗಿದೆ.<br>ಅನುದಾನದ ಲಭ್ಯತೆಯ ಮೇರೆಗೆ ಕೊಠಡಿ ನಿರ್ಮಾಣದ ಅವಶ್ಯಕತೆಯಿರುವ ಸರ್ಕಾರಿ ಶಾಲೆಗಳಿಗೆ ವರ್ಷವಾರು ಮುಂದುವರೆದ ಯೋಜನೆಗಳಡಿ ಕಾಮಗಾರಿಗಳನ್ನು ಮಂಜೂರು ಮಾಡುವುದನ್ನು ಮುಂದುವರೆಸಿದೆ. |
| ಆ) | ಸರ್ಕಾರವು ಈ ಯೋಜನೆಯನ್ನು ಸ್ಥಗಿತಗೊಳಿಸಿದ್ದರೆ ಕಾರಣಗಳನ್ನು ನೀಡುವುದು; | ಅನ್ವಯಿಸುವುದಿಲ್ಲ. |
| ಇ) | ಈ ಯೋಜನೆಯನ್ನು ಸರ್ಕಾರ ಉನ್ನತೀಕರಿಸಿದ ಶಾಲೆಗಳಿಗೆ ವಿಸ್ತರಿಸಲು ಉದ್ದೇಶವನ್ನು ಹೊಂದಿದೆಯೇ; (ವಿವರ ಒದಗಿಸುವುದು) | ಈ ಯೋಜನೆಯಡಿ ಉನ್ನತೀಕರಿಸಿದ ಶಾಲೆಗಳನ್ನು ಒಳಗೊಂಡಂತೆ ಕೊಠಡಿ ನಿರ್ಮಾಣದ ಅಗತ್ಯತೆ ಇರುವ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. |
| ಈ) | ಯಾವ ಯಾವ ಶಾಲೆಗಳನ್ನು ಈ ಯೋಜನೆ ಅಡಿಯಲ್ಲಿ ಉನ್ನತೀಕರಿಸಲು ರೂಪು-ರೇಷೆಗಳನ್ನು ಹಾಕಿಕೊಳ್ಳಲಾಗಿದೆ? (ಜಿಲ್ಲಾವಾರು ಶಾಲೆಗಳ ವಿವರ ನೀಡುವುದು) | ಸದರಿ ಯೋಜನೆಯಡಿ ಕೊಠಡಿ ನಿರ್ಮಾಣದ ಅಗತ್ಯತೆ ಇರುವ ಎಲ್ಲಾ ಸರ್ಕಾರಿ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಉನ್ನತೀಕರಿಸಿದ, ಪ್ರೌಢ ಹಾಗೂ ಕೆಪಿಎಸ್ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. ಈ ಯೋಜನೆಯು ಹೊಸದಾಗಿ ಶಾಲೆಗಳನ್ನು ಉನ್ನತೀಕರಿಸುವ ಯೋಜನೆಯಾಗಿರುವುದಿಲ್ಲ. |

**ಇಪಿ 322 ಯೋಸಕ 2024**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**